# ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)
## ರಾಜ್ಯ ಸಮಿತಿ, ಕರ್ನಾಟಕ

ಮಾನ್ಯ ಸಂಪಾದಕರೆ, ಮಾಧ್ಯಮ ಪ್ರತಿನಿಧಿಗಳೆ, ಶುಭಾಶಯಗಳು.

ಪರಿಷ್ಕರಣವಾದಿ ಸಿಪಿಐ (ಎಂ.ಎಲ್) ಪಕ್ಷವು ಕರ್ನಾಟಕ ರಾಜ್ಯದ ಸಾವಿರಾರು ಹಳ್ಳಿಗಳಲ್ಲಿ ಇದೇ ತಿಂಗಳ 25ರಂದು ನಕ್ಸಲ್ಬರಿ ದಿನಾಚರಣೆಯನ್ನು ಆಚರಿಸುತ್ತದೆ ಎಂಬ ಪ್ರಕಟಣೆ ಹಾಗೂ ನಮ್ಮ ಪಕ್ಷದ ಮೇಲೆ ಮಾಡಿರುವ ದಾಳಿಯ ಕುರಿತು ನಮ್ಮ ಈ ಹೇಳಿಕೆಯನ್ನು ಬಿಡುಗಡೆ ಮಾಡುತ್ತಿದ್ದೇವೆ. ಇದನ್ನು ಪರಿಗಣಿಸಿ ಪ್ರಕಟಿಸಬೇಕೆಂದು ಕೋರುತ್ತಿದ್ದೇವೆ.

ಹೋರಾಟದಲ್ಲಿ ತಮ್ಮೊಂದಿಗೆ,

ಗಂಗಾಧರ್<br>
ರಾಜ್ಯ ಸಮಿತಿ ಪರವಾಗಿ<br>
ಸಿಪಿಐ(ಮಾವೋವಾದಿ)<br>
ಕರ್ನಾಟಕ

11/05/2009

---

**ಕ್ರಾಂತಿಕಾರಿ ಹೋರಾಟಕ್ಕೆ ಎಂದೂ ಸಿದ್ಧವಿಲ್ಲದ, ಬಲ ಅವಕಾಶವಾದದಲ್ಲಿ ಮುಳುಗಿದ್ದು ಈಗ ಪರಿಷ್ಕರಣವಾದಿಯಾಗಿ ಸಂಸದೀಯ ಕೊಚ್ಚೆಗುಂಡಿಯಲ್ಲಿ ಹೊರಳಾಡುತ್ತಿರುವ ಪಕ್ಷ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ-ಲೆನಿನ್‌ವಾದಿ) ಆಗಿದೆ. ಮೊದಲು ರೆಡ್‌ಫ್ಲಾಗ್ ಎಂದು ಕರೆದುಕೊಂಡಿದ್ದ ಕಾಲದಲ್ಲಿ ನಕ್ಸಲ್ಬರಿ ಹೋರಾಟವನ್ನು ಪ್ರತಿಪಾದಿಸುತ್ತಿದ್ದರೂ ಆಚರಣೆಯಲ್ಲಿ ಇಳಿದು ಹೋರಾಟವನ್ನು ಕಟ್ಟುವಲ್ಲಿ ಪ್ರಯತ್ನ ಇರಲಿಲ್ಲ. ಬಲ ಅವಕಾಶವಾದಿ ಆಚರಣೆಯಲ್ಲಿ ಮುಳುಗಿತ್ತು.**

ನಂತರ ಮಹಾನ್ ನಕ್ಸಲ್ಬರಿ ಚಳುವಳಿಯ ಮೇಲೆ ಸೌರೇನ್ ಬಸುರಂತಹ ದ್ರೋಹಿಗಳನ್ನು ಬಳಸಿಕೊಂಡು ದಾಳಿ ನಡೆಸಿತ್ತು. ನಕ್ಸಲ್ಬರಿ ಚಳುವಳಿಯ ಬಗ್ಗೆ ವಿಕೃತ ಅಪಪ್ರಚಾರ ನಡೆಸಿ ತನ್ನ ಪರಿಷ್ಕರಣವಾದಿ ಹಾದಿಗೆ ಸಮರ್ಥನೆ ಒದಗಿಸಿಕೊಳ್ಳಲು ಪ್ರಯತ್ನಿಸಿತ್ತು. ನಂತರ ಪೂರ್ಣ ಪರಿಷ್ಕರಣವಾದಿಯಾಗಿ ಆಳುವ ವರ್ಗಗಳ ಹಾಗೂ ಸಾಮ್ರಾಜ್ಯಶಾಹಿಗಳ ಸೇವೆ ಮಾಡುತ್ತಿದೆ. ಭಾರತದಲ್ಲಿ ಬಂಡವಾಳಶಾಹಿ ಬದಲಾವಣೆ ಬಂದಿದೆಯೆಂದು ಪ್ರತಿಪಾದಿಸುತ್ತಾ ಊಳಿಗಮಾನ್ಯ ಭೂಮಾಲೀಕ ವಿರೋಧಿ ಹೋರಾಟದ ಪ್ರತಿಪಾದನೆ ಕೈಬಿಟ್ಟಿತು. ಸಾಮ್ರಾಜ್ಯಶಾಹಿ ವಿರೋಧಿ ಘೋಷಣೆಗಳನ್ನು ಉಚ್ಛರಿಸುತ್ತಾ ಚುನಾವಣಾ ರಾಜಕೀಯದ ಹೊಲಸುಗುಂಡಿಗೆ ಇಳಿದು ಮುಳುಗಿತು. ಈಗ ಮತ್ತೆ ಮಹಾನ್ ನಕ್ಸಲ್ಬರಿ ಹೋರಾಟದ ಹೆಸರನ್ನು ದುರ್ಬಳಕೆ ಮಾಡಿ ಜನರನ್ನು ಮರುಳುಗೊಳಿಸಲು ಪ್ರಯತ್ನಿಸುತ್ತಿದೆ. ನವ ಪ್ರಜಾಸತ್ತಾತ್ಮಕ ನಂತರ ಸಮಾಜವಾದಿ ಕ್ರಾಂತಿಕಾರಿ ಹಾದಿಗೆ ಎಂದೂ ಆಚರಣಾತ್ಮಕವಾಗಿ ಹೊರಳದ ಇವರುಗಳು ಇಂದು ನಕ್ಸಲ್ಬರಿ ದಿನವನ್ನು ಆಚರಿಸಲು ತೊಡಗುವ ಜೊತೆಗೆ ಭಾರತದ ಕ್ರಾಂತಿಗೆ ಅಪಾರವಾದ ತ್ಯಾಗ ಬಲಿದಾನಗಳನ್ನು ಮಾಡುತ್ತಾ ಸೈದ್ಧಾಂತಿಕ ಸ್ಪಷ್ಟತೆಯೊಂದಿಗೆ ನಾಯಕತ್ವ ವಹಿಸುತ್ತಿರುವ ನಮ್ಮ ಪಕ್ಷವಾದ ಸಿಪಿಐ (ಮಾವೋವಾದಿ)ಯ ಮೇಲೆ ದಾಳಿ ಮಾಡಲು ಹೊರಟಿದೆ.

ನಕ್ಸಲ್ಬರಿಯ ವಾರಸುದಾರರಾಗಿ ನಾವು ದೇಶಾದ್ಯಂತ ಕ್ರಾಂತಿಕಾರಿ ಚಳುವಳಿಯನ್ನು ಪ್ರಜಾ ಸೇನೆಯನ್ನು, ಐಕ್ಯರಂಗಗಳನ್ನು ಕಟ್ಟಿ ಬೆಳೆಸುತ್ತಿದ್ದೇವೆ. ಮೊನ್ನಿನ ಅವರ ಪತ್ರಿಕಾ ಗೋಷ್ಠಿಯಲ್ಲಿ ನಮ್ಮ ಪಕ್ಷದ ನೇತೃತ್ವದಲ್ಲಿನ ಚಳುವಳಿ, ನಕ್ಸಲ್ಬರಿ ಚಳುವಳಿಗೆ ಮಾಡುತ್ತಿರುವ ಅಪಚಾರ ಎಂದು ಹೇಳಿ ತಮ್ಮ ಪರಿಷ್ಕರಣವಾದಿ ಜನದ್ರೋಹಿ ಮುಖಗಳನ್ನು ಮರೆಮಾಚಲು ಯತ್ನಿಸಿದ್ದಾರೆ. ಆಳುವ ವರ್ಗ ಮತ್ತವರ ಪಡೆಗಳು ನಡೆಸುತ್ತಿರುವ ಫ್ಯಾಸಿಸ್ಟ್ ಭಯೋತ್ಪಾದನೆ ಬಗ್ಗೆ ಚಕಾರವೆತ್ತದ, ಅದರ ವಿರುದ್ಧ ಜನರನ್ನು ಸಂಘಟಿಸದ ಈ ಪಕ್ಷ ನಾವು ನಡೆಸುತ್ತಿರುವ ಸಶಸ್ತ್ರ ಹೋರಾಟವನ್ನು ನಿಲ್ಲಿಸುವಂತೆ ಹೇಳಿಕೆ ಕೊಡುತ್ತದೆ. ಕನಿಷ್ಠ ಪ್ರಜಾತಾಂತ್ರಿಕವಾಗಿಯೂ ವರ್ತಿಸದೆ ಆಳುವ ವರ್ಗಗಳಿಗೆ ಪೂರಕವಾಗಿ

ನಿಲುವು ತಾಳುತ್ತದೆ. ನಕ್ಸಲ್ಬರಿ ದಾರಿಗೆ ಎಂದಿಗೂ ಹೊರಳದೆ ಇದ್ದವರು ಈಗ ನಕ್ಸಲ್ಬರಿ ಒಂದೇ ದಾರಿ ಎಂದು ಘೋಷಣೆ ಇಟ್ಟುಕೊಂಡು ನಕ್ಸಲ್ಬರಿಯ 42ನೇ ವರ್ಷಾಚರಣೆ ಮಾಡುತ್ತಾರೆ ಎಂದರೆ ಇದು ಜನರಿಗೆ ಮಾಡುತ್ತಿರುವ ಮೋಸವಲ್ಲದೆ ಬೇರೇನೂ ಅಲ್ಲ. ಇದು ನಡೆಯುತ್ತಿರುವ ಕ್ರಾಂತಿಗೆ ಅಪಚಾರವಾಗಿದೆ. ಅವರು ಹೇಳುತ್ತಿರುವ ಭೂಮಿ ವಶಪಡಿಸಿಕೊಳ್ಳುವಿಕೆ ಹಾಗೂ ಹಂಚಿಕೆ ಇತ್ಯಾದಿಗಳೆಲ್ಲಾ ಬರಿ ಬೊಗಳೆಗಳಾಗಿದ್ದು ಜನರಿಗೆ ಮಂಕುಬೂದಿ ಎರಚುವ ಯತ್ನವಾಗಿದೆ. ಈ ಮೂಲಕವಾದರೂ ತಮಗೆ ಮುಂದಿನ ಚುನಾವಣೆಗಳಲ್ಲಿ ಒಂದಷ್ಟು ಓಟು ದಕ್ಕಿಸಿಕೊಳ್ಳಬಹುದೆಂಬ ಯೋಜನೆ ಹಾಕಿದ್ದಾರೆ.

ಪರಿಷ್ಕರಣವಾದಿ, ಆಳುವ ವರ್ಗಗಳ ಸೇವಕ ಸಿಪಿಐ (ಎಂ.ಎಲ್) ಪಕ್ಷದ ಕುತಂತ್ರಗಳು ಹಾಗೂ ಕ್ರಾಂತಿಕಾರಿ ಚಳುವಳಿ ಮೇಲಿನ ದಾಳಿ ಹಾಗೂ ವಿಕೃತ ಅಪಪ್ರಚಾರಗಳನ್ನು ನಾಡಿನ ಜನರು ತಿರಸ್ಕರಿಸಬೇಕೆಂದು ಕರೆ ಕೊಡುತ್ತಿದ್ದೇವೆ.

ಗಂಗಾಧರ್
ರಾಜ್ಯ ಸಮಿತಿ ಪರವಾಗಿ
ಸಿಪಿಐ (ಮಾವೋವಾದಿ)
ಕರ್ನಾಟಕ

11/05/2009